**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ, ಬಂಗಾರಪೇಟೆ**

**ಸಿ.ಸಿ.ಸಂಖ್ಯೆ: 29/2021**

**ಪಿರ್ಯಾದುದಾರರು:-** ರಾಜ್ಯ ಪರ ಬಂಗಾರಪೇಟೆ ಪೋಲೀಸರು.

**ವಿರುದ್ಧ**

**ಆರೋಪಿಗಳು:-**

**1.** ನಂದೀಶ್, ಬಿನ್ ಸೋಮಶೇಖರ್, **19** ವರ್ಷ,
**2.** ಸುಂದರೇಶ್, ಬಿನ್ ಮುನಿವೆಂಕಟಪ್ಪ, **20** ವರ್ಷ,
**3.** ಸುನಿಲ್, ಬಿನ್ ವೆಂಕಟಮುನಿಯಪ್ಪ, **25** ವರ್ಷ,
**4.** ಪ್ರಸನ್ನ, ಬಿನ್ ರಾಮಕೃಷ್ಣಪ್ಪ, **30** ವರ್ಷ,
**5.** ನವೀನ್, ಬಿನ್ ಗಂಗಪ್ಪ, **26** ವರ್ಷ,
**6.** ರಾಮಕೃಷ್ಣಪ್ಪ ಬಿನ್ ವೆಂಕಟಸ್ವಾಮಿ, **62** ವರ್ಷ,
**7.** ಮುನಿವೆಂಕಟಪ್ಪ, ಬಿನ್ ಚಿನ್ನಪ್ಪ, **59** ವರ್ಷ,
ಎಲ್ಲರ ವಾಸ: ಆಲಂಬಾಡಿ ಗ್ರಾಮ,
ಬಂಗಾರಪೇಟೆ ತಾಲ್ಲುಕು.

**ದೋಷಾರೋಪಣೆ**

ಬಂಗಾರಪೇಟೆಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರಾದ ಶ್ರೀ ಬಿ. ಕೇಶವಮೂರ್ತಿ, ಬಿ.ಎಲ್.ಎಲ್.ಬಿ ಆದ ನಾನು ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಹೊರಿಸುತ್ತೇನೆ.

ಚಾಸಾ-5 ರವರಿಗೆ ಸೇರಿದ ಆಲಂಬಾಡಿ ಸರ್ವೇ ನಂ.121/7 ರಲ್ಲಿನ ಒಟ್ಟು 0.18 ಗುಂಟೆ ಜಮೀನಿನ ಚೆಕ್ ಬಂದಿ ಗುರುತಿಸಿಕೊಡಲು ಈಗ್ಗೆ ಸುಮಾರು ಐದಾರು ತಿಂಗಳ ಹಿಂದೆ ಬಂಗಾರಪೇಟೆ ತಾಲ್ಲೂಕು ತಹಸೀಲ್ದಾರ್ ರವರಿಗೆ ಅರ್ಜಿಯನ್ನು ಸಲ್ಲಿಸಿಕೊಂಡಿದ್ದು, ದಿನಾಂಕ:20.10.2020 ರಂದು ಮಧ್ಯಾಹ್ನ ಸುಮಾರು 2.00 ಗಂಟೆಯಲ್ಲಿ ಸರ್ವೇಯರ್ ರವರಾದ ಚಾಸಾ-8 ರವರು ಜಮೀನಿನ ಬಳಿ ಚೆಕ್ಕು ಬಂದಿಗಳನ್ನು ಗುರುತಿಸಲು ಬಂದಿದ್ದಾಗ, ಆರೋಪಿಗಳಾದ ನೀವು ಅಕ್ರಮ ಕೂಟ ಕಟ್ಟಿಕೊಂಡು , ನಿಮ್ಮಗಳ ಪೈಕಿ ಆರೋಪಿ ನಂ.4, 5, 6 ಮತ್ತು 7 ರವರುಗಳು ಚೆಕ್ಕು ಬಂದಿಗಳನ್ನು ಗುರುತಿಸಬಾರದೆಂದು ಚಾಸಾ-2, 4 ಮತ್ತು 5 ರವರೊಂದಿಗೆ ಗಲಾಟೆಗಳನ್ನು ಮಾಡಿ, ಕೈಗಳಿಂದ ಚಾಸಾ-2 ರವರಿಗೆ ಹೊಡೆದು ಮೈಮೇಲೆಲ್ಲಾ

ಉಗುರುಗಳಿಂದ ಪರಚಿದ್ದು, ಈ ಪ್ರಕಾರ ಆರೋಪಿಗಳಾದ ನೀವುಗಳು ಭಾರತ ದಂಡ ಸಂಹಿತೆ ಕಲಂ 143 ಮತ್ತು 323 ಸಹಕಲಂ 149 ರ ರೀತ್ಯ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ಮತ್ತು

ಎರಡನೆಯದಾಗಿ ಸದರಿ ದಿನಾಂಕ, ಸಂಜೆ ಸುಮಾರು 5.30 ಗಂಟೆಯಲ್ಲಿ ಚಾಸಾ-1 ರವರು ಆಲಂಬಾಡಿ ಗ್ರಾಮದ ಬಳಿಯಿರುವ ಬಂಡೆಯ ಹತ್ತಿರ ಹಸುಗಳ ಬಳಿ ಕಸವನ್ನು ಗುಡಿಸುತ್ತಿದ್ದಾಗ, ಆರೋಪಿ ನಂ.1, 2, 3 ರವರು ಚಾಸಾ-1 ರವರನ್ನು ಕುರಿತು 'ಈ ಸೂಳೆ ಮುಂಡೆ ಒಬ್ಬಳು, ಇವಳನ್ನು ಮುಗಿಸಿಬಿಡಬೇಕು' ಎಂದು ಬೈಯುತ್ತಿದ್ದು, ಚಾಸಾ-1 ರವರು ಹೋಗಿ ಕೇಳಿದ್ದಕ್ಕೆ ಈ ಮೂರೂ ಜನರು ಏಕಾಏಕಿ ಗಲಾಟೆ ಮಾಡಿ, ಆರೋಪಿ ನಂ.1 ಒಂದು ದೊಣ್ಣೆಯಿಂದ ಚಾಸಾ-1 ರವರ ತಲೆಯ ಮೇಲೆ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯವನ್ನುಂಟು ಮಾಡಿದ್ದು, ಈ ಪ್ರಕಾರ ಆರೋಪಿಗಳಾದ ನೀವುಗಳು ಭಾರತ ದಂಡ ಸಂಹಿತೆ ಕಲಂ 324 ಮತ್ತು 504 ಸಹ ಕಲಂ 149 ರ ರೀತ್ಯ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ಮತ್ತು

ಮೂರನೇಯದಾಗಿ ಮೇಲೆ ಹೇಳಿದ ದಿನ, ಸ್ಥಳ ಮತ್ತು ಸಮಯದಲ್ಲಿ ಮೇಲ್ಕಂಡ ಆರೋಪಿಗಳಾದ ನೀವುಗಳು ಅಕ್ರಮ ಕೂಟದ ಸದಸ್ಯರಾಗಿ ಸಮಾನ ಉದ್ದೇಶದಿಂದ ಮೇಲ್ಕಂಡಂತೆ ಚಾಸಾ-1 ರವರೊಂದಿಗೆ ಏಕಾಏಕಿ ಗಲಾಟೆ ಮಾಡಿ, ಆರೋಪಿ ನಂ.2 ರವರು ಚಾಸಾ-1 ರವರ ಎಡಗೈಯನ್ನು ತಿರುಗಿಸಿದ್ದು , ಆರೋಪಿ 3 ರವರು ಕಾಲಿನಿಂದ ಚಾಸಾ-1 ರವರ ಬೆನ್ನಿನ ಹಿಂದೆ ಒದ್ದು ಕೆಳಗೆ ಬೀಳಿಸಿದ್ದು, ಆ ಮೂಲಕ ಆರೋಪಿಗಳಾದ ನೀವು ಭಾ.ದಂ.ಸಂ. ಕಲಂಃ 323, 341 ಸಹವಾಚಕ ಕಲಂಃ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ನಾಲ್ಕನೇಯದಾಗಿ, ಸದರಿ ದಿನಾಂಕ, ಸಮಯ ಮತ್ತು ಸ್ಥಳದಂದು ಮೇಲ್ಕಂಡ ಆರೋಪಿಗಳಾದ ನೀವುಗಳು ಅಕ್ರಮ ಕೂಟದ ಸದಸ್ಯರಾಗಿ ಸಮಾನ ಉದ್ದೇಶದಿಂದ ಚಾಸಾ-1 ರವರೊಂದಿಗೆ ಏಕಾಏಕಿ ಗಲಾಟೆ ಮಾಡಿ, ಆರೋಪಿ ನಂ.1 ರಿಂದ 3 ರವರು ಚಾಸಾ-1 ರವರನ್ನು ಕುರಿತು ನಿನ್ನನ್ನು ಮತ್ತು ನಿಮ್ಮ ಮನೆಯವರನ್ನು ಸಾಯಿಸದೇ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆಯನ್ನು ಹಾಕಿರುವುದಾಗಿ, ಈ ಪ್ರಕಾರ ಆರೋಪಿಗಳಾದ ನೀವುಗಳು ಭಾರತ ದಂಡ ಸಂಹಿತೆ ಕಲಂ 506 ಸಹ ಕಲಂ 149 ರ ರೀತ್ಯ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ಆಪಾದಿಸುತ್ತೇನೆ.

**ದಿನಾಂಕಃ 26** ನೇ ಡಿಸೆಂಬರ್ **2023.**

ಸಹಿ/-
(ಬಿ.ಕೇಶವಮೂರ್ತಿ)
**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು**
**ಬಂಗಾರಪೇಟೆ**